# ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:15-07-2015ರ ನಡವಳಿಗಳು

## ವಿಷಯದ ಸಂಖ್ಯೆ : 139 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನ್-ಲೈನ್ ಮೂಲಕ ಕಾಮಗಾರಿ ಬಿಲ್ಲುಗಳ ಮೊಬಲಗನ್ನು ಪಾವತಿಸಲು ಅಳವಡಿಸಿಕೊಂಡಿರುವ ಪದ್ಧತಿಯನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವಾರು ಅಭಿವೃದ್ಧಿ ಮತ್ತು ನಿರ್ವಹಣಾ ಕಾಮಗಾರಿಗಳನ್ನು ಪಾಲಿಕೆಯ ಸ್ವಂತ ಆದಾಯ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ಬಿಡುಗಡೆಮಾಡುವ ಅನುದಾನಗಳಿಂದ, ಕಾಮಗಾರಿ ವಿಭಾಗಗಳ ಮೂಲಕ ಕೈಗೊಳ್ಳುತ್ತಿದ್ದು, ಈ ಹಿಂದೆ ಈ ರೀತಿಯಾಗಿ ಕೈಗೊಂಡ ಕಾಮಗಾರಿಗಳನ್ನು ನಿರ್ವಹಿಸಿರುವ ಗುತ್ತಿಗೆದಾರರುಗಳ ಭಾಗಶಃ ಅಥವಾ ಪೂರ್ಣಗೊಂಡ ಬಿಲ್ಲುಗಳನ್ನು ಜೇಷ್ಠತೆ ಅನುಸರಿಸದೇ ಪಾವತಿಸಿದ ಕಾರಣ ಹಾಗೂ ವಿಶೇಷ ಹಣ ಭರವಸೆ (Special LOC) ಪತ್ರಗಳನ್ನು ಬಿಡುಗಡೆ ಮಾಡಿ ಗುತ್ತಿಗೆದಾರರುಗಳ ಬಾಕಿ ಬಿಲ್ಲುಗಳಿಗೆ ಹಣ ಪಾವತಿಸಲು ಕ್ರಮವಹಿಸಲಾಗುತ್ತಿತ್ತು. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಾಕಿ ಬಿಲ್ಲುಗಳನ್ನು ಸಾಮಾನ್ಯ ಜೇಷ್ಠತೆ ಅನುಸರಿಸಿ ಪಾವತಿಸುತ್ತಿಲ್ಲವೆಂದು ಗುತ್ತಿಗೆದಾರರು ಧರಣಿ ನಡೆಸಿ, ನ್ಯಾಯಲಯದಲ್ಲಿ ದಾವೆ ಹೂಡಿದ್ದು ಈ ಬಗ್ಗೆ ಘನ ಉಚ್ಚ ನ್ಯಾಯಲಯವು ರಿಟ್ ಪಿಟಿಷನ್ ಸಂಖ್ಯೆ:6883/2015ರ ಸಂಬಂಧ ದಿನಾಂಕ:17-04-2015ರಂದು ಪಾಲಿಕೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿರುವ ಎಲ್ಲಾ ಗುತ್ತಿಗೆದಾರರುಗಳ ಬಾಕಿ ಬಿಲ್ಲುಗಳನ್ನು ಸಾಮಾನ್ಯ ಜೇಷ್ಠತೆ ಅನುಸರಿಸಿ ಪಾವತಿಗೆ ಕ್ರಮವಹಿಸಲು ತೀರ್ಪು ನೀಡಿಲಾಗಿರುತ್ತದೆ.

ಘನ ಉಚ್ಚ ನ್ಯಾಯಲಯದ ದಿನಾಂಕ:17-04-2015ರ ಆದೇಶದಂತೆ ಹಾಗೂ ಪಾಲಿಕೆಯಲ್ಲಿ ಆರ್ಥಿಕ ಶಿಸ್ತನ್ನು ತರಲು ಆಯುಕ್ತರ ಸುತ್ತೋಲೆ ಸಂಖ್ಯೆ:ಮುಲೆಅ/ಪಿಆರ್/696/2015-16, ದಿನಾಂಕ:23-04-2015ರ ಸುತ್ತೋಲೆಯಲ್ಲಿ, ದಿನಾಂಕ:18-04-2015ಕ್ಕೂ ಹಿಂದೆ ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿಯಲ್ಲಿ ಬಿಡುಗಡೆ ಮಾಡಿರುವ ವಿಶೇಷ ಹಣ ಭರವಸೆ ಪತ್ರ ಹಾಗೂ ನಿಧಿ ವರ್ಗಾವಣೆ ಮಾಡಲು ಬಾಕಿಯಿರುವ ಎಲ್ಲಾ ರೀತಿಯ ಪ್ರಸ್ತಾವನೆಗಳನ್ನು ಸ್ಥಗಿತಗೊಳಿಸಿ ಆದೇಶಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಥಿಕ ಶಿಸ್ತನ್ನು ತರಲು ಈ ಹಿಂದಿನ ಪದ್ಧತಿಗೆ ಸುಧಾರಣೆ ಮಾಡಲು ಒಂದು ಪರಿಣಾಮಕಾರಿ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ನಿರ್ಣಯಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರುಗಳ ಬಾಕಿ ಬಿಲ್ಲುಗಳನ್ನು ಅನ್-ಲೈನ್ ಅಡಿಯಲ್ಲಿ ಪಾವತಿಸಲು ಕ್ರಮವಹಿಸಲು ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಆಯುಕ್ತರು/ಪಿಆರ್/ಸಿ1-186/2015-16 ದಿನಾಂಕ:06-05-2015 ರಲ್ಲಿ ಪಾಲಿಕೆಯಲ್ಲಿ ಎಲ್ಲಾ ರೀತಿಯ ಪಾವತಿಗಳನ್ನು ಅನ್-ಲೈನ್ ಅಡಿಯಲ್ಲಿಯೇ ಕಡ್ಡಾಯವಾಗಿ ಪಾವತಿಸಲು ಕ್ರಮವಹಿಸಲು ಆದೇಶಿಸಲಾಗಿರುತ್ತದೆ.

ಹಾಲಿ ಪಾಲಿಕೆಯಲ್ಲಿ ಮೆ॥ ವಲ್ಲಭ್ ಸಾಫ್ಟ್‌ವೇರ್ ಸಲ್ಯುಷನ್ .ಪ್ರೈ. ಲಿ. ರವರು ಸಿದ್ದಪಡಿಸಿರುವ "IFMS: Integrated Financial Management System" ತಂತ್ರಾಂಶವನ್ನು ಪಾಲಿಕೆಯ ವತಿಯಿಂದ ಮಂಜೂರಾದ ಕಾಮಗಾರಿಗಳಿಗೆ 'ಜಾಬ್ ಸಂಖ್ಯೆ'ಯನ್ನು ನೀಡಲು ಹಾಗೂ 'ಸಾಧಿಲ್ವಾರು' ವೆಚ್ಚಗಳ ಸಲುವಾಗಿ ಬಳಸಿಕೊಳ್ಳಲಾಗುತ್ತಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇಲ್ಲಿ ಗುತ್ತಿಗೆದಾರರುಗಳ ಬಾಕಿ ಬಿಲ್ಲುಗಳನ್ನು ಅನ್-ಲೈನ್ ಪದ್ಧತಿಯಡಿಯಲ್ಲಿ ಪಾವತಿಸುವ ಸಲುವಾಗಿ ಅಳವಡಿಸಿಕೊಂಡು ಪರಿಣಾಮಕಾರಿಯಾಗಿ ಬಳಸುತ್ತಿರುವ ತಂತ್ರಾಂಶದಂತೆಯೇ ಕೆಲವು ಮಾರ್ಪಾಟುಗಳನ್ನು ಮಾಡಿಸಿ, ಹಾಲಿ ಮೇ.ವಲ್ಲಭ್ ಸಾಫ್ಟ್‌ವೇರ್

...................2

ಸಲ್ಯೂಷನ್ ಪ್ರೈ. ಲಿ. ರವರ ಮೂಲಕ ಸಿದ್ದಪಡಿಸಿ ಉಪಯೋಗಿಸುತ್ತಿರುವ ತಂತ್ರಾಂಶದಲ್ಲಿಯೇ ಅಗತ್ಯ ಮಾರ್ಪಾಟುಗಳನ್ನು ಮಾಡಿಕೊಂಡು ಗುತ್ತಿಗೆದಾರರುಗಳ ಬಾಕಿ ಬಿಲ್ಲುಗಳನ್ನು ಅನ್-ಲೈನ್ ಅಡಿಯಲ್ಲಿ ಪಾವತಿಸಲು ವಿವಿಧ ಇಲಾಖಾ ಮುಖ್ಯಸ್ಥರುಗಳೊಂದಿಗೆ ಹಲವು ಸುತ್ತಿನ ಚರ್ಚೆ ನಡೆಸಿ ತೀರ್ಮಾನಿಸಲಾಯಿತು.

ಅನ್-ಲೈನ್ ಅಡಿಯಲ್ಲಿ ಗುತ್ತಿಗೆದಾರರುಗಳ ಬಾಕಿ ಬಿಲ್ಲುಗಳನ್ನು ಪಾವತಿಸಲು ರೂಪಿಸಿರುವ ತಂತ್ರಾಂಶವನ್ನು ಉಪಯೋಗಿಸುವ ಬಗ್ಗೆ ಮತ್ತು ತಂತ್ರಾಂಶದ ಕಾರ್ಯವಿಧಾನದ ಬಗ್ಗೆ ಕಾಮಗಾರಿ ಇಲಾಖೆಯ ಹಾಗೂ ಲೆಕ್ಕ ಪತ್ರ ಮತ್ತು ಹಣಕಾಸು ವಿಭಾಗದ ಎಲ್ಲಾ ವೃಂದದ ಅಧಿಕಾರಿ/ನೌಕರರಿಗೆ ಸದರಿ ಸಂಸ್ಥೆಯ ತಾಂತ್ರಿಕ ಸಹಾಯಕರಿಂದ ಹಲವು ಸುತ್ತಿನ ತರಬೇತಿಗಳನ್ನು ನೀಡಿ ಸದರಿ ತಂತ್ರಾಂಶದಲ್ಲಿ ಸೆಪ್ಟಂಬರ್-2013 ರವರೆಗೆ ಪಾಲಿಕೆಯ ಕಾಮಗಾರಿಗಳ ಬಾಕಿ ಇದ್ದ ಬಿಲ್ಲುಗಳನ್ನು ಪಾವತಿಸಲು ದಿನಾಂಕ: 03-06-2015 ರಿಂದ "ಆನ್‌ಲೈನ್" ಮೂಲಕ ಪ್ರಾಯೋಗಿಕವಾಗಿ ಕ್ರಮಕೈಗೊಳ್ಳಲಾಗಿದೆ..

ಮೇಲಿನ ಅಂಶಗಳನ್ನು ತಮ್ಮ ಘನ ಅವಗಾಹನೆಗೆ ತರುತ್ತಾ ಈ ಕೆಳಕಂಡ ಕಾರಣಗಳಿಗಾಗಿ ಪಾಲಿಕೆಯಲ್ಲಿ ಕಾಮಗಾರಿಗಳ ಬಾಕಿ ಬಿಲ್ಲುಗಳ ಪಾವತಿ ಬಗ್ಗೆ, ಈ ಹಿಂದಿನ ಪದ್ದತಿಗೆ ಹಲವು ಅಗತ್ಯ ಸುಧಾರಣೆ ಮಾಡಿ. ಅಳವಡಿಸಿಕೊಂಡಿರುವ "ಅನ್-ಲೈನ್" ಪದ್ದತಿಯಲ್ಲಿ 'ಆರ್.ಟಿ.ಜಿ.ಎಸ್.' ಮೂಲಕ ಪಾವತಿಯನ್ನು ಸ್ಥಿರೀಕರಿಸಲು ಹಾಗೂ ಸದರಿ ಪದ್ದತಿಯನ್ನು ನಿರಂತರವಾಗಿ ಮುಂದುವರೆಸಲು ಪಾಲಿಕೆಯು ಉದ್ದೇಶಿಸಿದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರ ಬಾಕಿ ಬಿಲ್ಲುಗಳನ್ನು ಸಾಮಾನ್ಯ ಜೇಷ್ಠತೆ ಅನುಸರಿಸಿ ಪಾವತಿಸಲು ಹಾಗೂ ಗುತ್ತಿಗೆದಾರರುಗಳು ಆಗಿಂದಾಗ್ಗೆ ಬಾಕಿ ಬಿಲ್ಲುಗಳ ಪಾವತಿಯನ್ನು ಜೇಷ್ಠತೆ ಅನುಸರಿಸಿ ಪಾವತಿಸುತ್ತಿಲ್ಲವೆಂದು ಧರಣಿ ನಡೆಸುವುದನ್ನು ತಪ್ಪಿಸಬಹುದಾಗಿದೆ.
2. ಘನ ಉಚ್ಚ ನ್ಯಾಯಲಯದ ಆದೇಶದಂತೆ ಎಲ್ಲಾ ಗುತ್ತಿಗೆದಾರರಿಗೂ ನಿಗದಿತ ಸಮಯದಲ್ಲಿ ಅನುದಾನದ ಲಭ್ಯತೆ ಮೇರೆಗೆ ಜೇಷ್ಠತೆ ಅನುಸಾರ 'ಆನ್‌ಲೈನ್' ಪದ್ಧತಿಯಲ್ಲಿ ಆರ್.ಟಿ.ಜಿ.ಎಸ್. ಮೂಲಕ ಪಾವತಿಗಳನ್ನು ಮಾಡಲು ಅನುಕೂಲವಾಗುತ್ತದೆ.
3. ಈ ಹಿಂದಿನ ಸಾಲುಗಳಲ್ಲಿ ಕೈಗೆತ್ತಿಕೊಂಡು ಪೂರ್ಣಗೊಂಡಿರುವ/ಪ್ರಗತಿಯಲ್ಲಿರುವ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಹಾಗೂ ಮುಂದಿನ ಸಾಲುಗಳಲ್ಲಿ ಕೈಗೊಳ್ಳುವ ಕಾಮಗಾರಿಗಳ ಬಿಲ್ಲುಗಳನ್ನು ಬಿ.ಆರ್.ಜೇಷ್ಠತೆ ಅನುಸರಿಸಿ ಪಾವತಿಸಲು ಅನುಕೂಲವಾಗುತ್ತದೆ ಹಾಗೂ ಬಿ.ಆರ್.ಜೇಷ್ಠತೆ ಉಲ್ಲಂಘನೆ ಮಾಡುವುದನ್ನು ತಪ್ಪಿಸಬಹುದಾಗಿದೆ.
4. ಪಾಲಿಕೆಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಬಿಲ್ಲುಗಳನ್ನು ಆನ್‌ಲೈನ್ ನಡಿ ಪಾವತಿಸಿದ ನಂತರ ಎಲ್ಲಾ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗುವಂತೆ Public Viewing ನೀಡುವುದರಿಂದ ಪಾರದರ್ಶಕ ಆಡಳಿತ ನೀಡಿದಂತಾಗುತ್ತದೆ.
5. Duplication of Works ಹಾಗೂ Double Payment ಮಾಡುವುದನ್ನು ತಪ್ಪಿಸಲು ಅನುಕೂಲವಾಗುತ್ತದೆ.
6. ಪ್ರತಿ ಸಾಲಿನಲ್ಲಿ ಅನುಮೋದನೆಯಾಗುವ ಆಯವ್ಯಯದಲ್ಲಿನ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗಧಿಪಡಿಸುವ ಅನುದಾನದ ಮಿತಿಯಲ್ಲಿಯೇ 'ಆನ್‌ಲೈನ್'ನಡಿ ಪಾವತಿಗಳನ್ನು ಮಾಡುವುದರಿಂದ ಅನುದಾನಗಳ ಮಾರ್ಗಪಲ್ಲಟವನ್ನು ತಡೆಯಬಹುದಾಗಿರುತ್ತದೆ.
7. ಅನುಮೋದಿತ ಕ್ರಿಯಾಯೋಜನೆಯಲ್ಲಿರುವ ಕಾರ್ಯಕ್ರಮ/ಕಾಮಗಾರಿಗಳಿಗೆ ಮಾತ್ರ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಡಿ ನಿಗಧಿಪಡಿಸಿರುವ ಅನುದಾನಕ್ಕೆ ಮಾತ್ರ ಎದುರಾಗಿ ಆನ್‌ಲೈನ್‌ನಡಿ ಪಾವತಿಗಳನ್ನು ಮಾಡಬಹುದಾಗಿರುತ್ತದೆ.
8. ಅನುದಾನ ಲಭ್ಯತೆ ಇಲ್ಲದಿದ್ದರೂ ಸಹ ವಿಶೇಷ ಹಣ ಭರವಸೆ (Special LOC) ಪತ್ರಗಳನ್ನು ಬಿಡುಗಡೆ ಮಾಡುವುದನ್ನು ತಪ್ಪಿಸಲು ಅನುಕೂಲವಾಗುತ್ತದೆ.

....................3

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಈಗಾಗಲೇ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಲು 'ಅನ್-ಲೈನ್' ಪದ್ದತಿಯನ್ನು ಜಾರಿಗೆ ತಂದು ಯಶಸ್ವಿಯಾಗಿರುವ ಅಂಶವನ್ನು ತಮ್ಮ ಘನ ಅವಗಾಹನೆಗೆ ತರುತ್ತಾ, ಮೇಲಿನ ಕಾರಣಗಳ ಹಿನ್ನಲೆಯಲ್ಲಿ ಪಾರದರ್ಶಕ ಆಡಳಿತದ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಎಲ್ಲಾ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಅಳವಡಿಸಿಕೊಂಡಿರುವ "ಆನ್‌ಲೈನ್" ಪದ್ದತಿಯಲ್ಲಿ 'ಆರ್.ಟಿ.ಜಿ.ಎಸ್.' ಮೂಲಕ ಪಾವತಿಯಾಗುವಂತೆ ಅನುಷ್ಠಾನಗೊಳಿಸಲು ಹಾಗೂ ಮುಂದುವರಿಸಿಕೊಂಡು ಹೋಗಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-07-2015ರ ಟಿಪ್ಪಣಿ.

**<u>ತೀರ್ಮಾನ:</u>** "ಎಲ್ಲಾ ಕಾಮಗಾರಿಗಳ ಬಿಲ್ಲುಗಳೊಂದಿಗೆ ಇನ್ನುಳಿದ ಎಲ್ಲಾ ಪಾವತಿಗಳನ್ನೂ, ವೈಯಕ್ತಿಕ ಫಲಾನುಭವಿಗಳಿಗೆ ನೀಡುವ ಒಂಟಿ ಮನೆ, ವೈದ್ಯಕೀಯ ಪರಿಹಾರ, ವ್ಯಕ್ತಿಗತ ಪಾವತಿಗಳು ಇತ್ಯಾದಿ ಸೇರಿದಂತೆ 'ಆನ್‌ಲೈನ್' ಪದ್ಧತಿಯಲ್ಲಿ ಆರ್.ಟಿ.ಜಿ.ಎಸ್. ಮೂಲಕವೇ ಪಾವತಿಯಾಗುವಂತೆ ಅನುಷ್ಠಾನಗೊಳಿಸಲು ಹಾಗೂ ಮುಂದುವರೆಸಿಕೊಂಡು ಹೋಗಲು ಅನುಮೋದಿಸಿದೆ. ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾಪಿಸಲು ಅನುಮೋದಿಸಿದೆ".

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು